# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲೆಕ್ಕ ಪತ್ರ ಸ್ಥಾಯಿ ಸಮಿತಿಯಲ್ಲಿ ದಿನಾಂಕ:16-02-2017ರಂದು ಮಧ್ಯಾಹ್ನ 3.00 ಗಂಟೆಗೆ ನಡೆದ ಸಭೆಯ ನಡವಳಿಗಳು

| ಕ್ರ. ಸಂ | ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1. | ನೇತ್ರಾ ನಾರಾಯಣ್ | – ಅಧ್ಯಕ್ಷರು | ಅಪರ ಆಯುಕ್ತರು (ಪೂರ್ವ) |
| 2. | ಸವಿತಾ ವಿ.ಕೃಷ್ಣ | – ಸದಸ್ಯರು | ಜಂಟಿ ಆಯುಕ್ತರು (ದಾಸರಹಳ್ಳಿ) |
| 3. | ಎನ್.ಉಮಾ | – ಸದಸ್ಯರು | ಮುಖ್ಯ ಅಭಿಯಂತರು(ಘ.ತ್ಯಾ.ನಿ) |
| 4. | ರಾಧಮ್ಮ ವೆಂಕಟೇಶ್ | – ಸದಸ್ಯರು | ಅಧೀಕ್ಷಕ ಅಭಿಯಂತರರು(ದಕ್ಷಿಣ) |
| 5. | ಜಿ.ಬಾಲಕೃಷ್ಣನ್ | – ಸದಸ್ಯರು | ಅಧೀಕ್ಷಕ ಅಭಿಯಂತರರು |
| 6. | ವಿ.ಸುರೇಶ್ | – ಸದಸ್ಯರು | (ಮಹದೇವಪುರ) |
| 7. | ಹೆಚ್.ಕುಸುಮಾ | – ಸದಸ್ಯರು | ಅಧೀಕ್ಷಕ ಅಭಿಯಂತರರು(ಪೂರ್ವ) |
| 8. | ಎಂ.ಮಾಲತಿ | – ಸದಸ್ಯರು | ಅಧೀಕ್ಷಕ ಅಭಿಯಂತರರು(ಪಶ್ಚಿಮ) |
| 9. | ಎಂ.ಶಾಮಲ | – ಸದಸ್ಯರು | ಅಧೀಕ್ಷಕ ಅಭಿಯಂತರರು |
| 10. | ಕೆ.ವಿ.ರಾಜೇಂದ್ರಕುಮಾರ್ | – ಸದಸ್ಯರು | (ಆರ್.ಆರ್.ನಗರ) |
| 11. | ಎಂ.ಗೌತಮ್ ಕುಮಾರ್ | – ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲಿಸಿಕೊಳ್ಳಲಾಯಿತು)

ಲೆಕ್ಕ ಪತ್ರ ಸ್ಥಾಯಿ ಸಮಿತಿಯ ಅಧ್ಯಕ್ಷರು, ಮಾತನಾಡುತ್ತಾ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ವ್ಯಾಪ್ತಿಗಳಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಖರ್ಚು ವೆಚ್ಚದ ವಿವರಗಳ ಬಗ್ಗೆ ಚರ್ಚಿಸುವ ಸಲುವಾಗಿ ಕರೆದಿರುವ ಸಭೆಯಲ್ಲಿ ಹಾಜರಿದ್ದ ಸ್ಥಾಯಿ ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸುತ್ತಾ ತಮ್ಮ ತಮ್ಮ ಪರಿಚಯ ಮಾಡಿಕೊಳ್ಳಲು ಕೋರಿದರು. ತತ್ಸಂಬಂಧವಾಗಿ ಸ್ಥಾಯಿ ಸಮಿತಿಯ ಸದಸ್ಯರು ಹಾಗೂ ಹಾಜರಿದ್ದ ಅಧಿಕಾರಿಗಳು ತಮ್ಮ ತಮ್ಮ ಪರಿಚಯವನ್ನು ಮಾಡಿಕೊಂಡರು.

ಅಧ್ಯಕ್ಷರು ಮಾತನಾಡುತ್ತಾ ಸಮಿತಿಯು ಈಗಾಗಲೇ ಎಲ್ಲಾ ವಲಯಗಳಿಗೆ ಭೇಟಿ ನೀಡಿ ಸಭೆಗಳನ್ನು ನಡೆಸಿ ಲೆಕ್ಕ ಪರಿಶೋಧನಾ ವರದಿಯಲ್ಲಿ ಬಾಕಿ ಇರುವ ಕಂಡಿಕೆಗಳು, ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ಮತ್ತು ವಸೂಲಾತಿ ಮೊತ್ತದ ಬಗ್ಗೆ ಹಾಗೂ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸಲು ಸೂಕ್ತ ಕ್ರಮ ಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ಸೂಚಿಸಲಾಗಿತ್ತು. ಆದರೆ, ಈ ಬಗ್ಗೆ ಅಧಿಕಾರಿಗಳು

ಗಂಭೀರವಾಗಿ ಪರಿಗಣಿಸದೇ ಇರುವುದು ಕಂಡುಬಂದಿದ್ದು, ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿಗೆ ಅನುಸರಣಾ ವರದಿಯನ್ನು ಸಲ್ಲಿಸಲು ಕೂಡಲೇ ಅಗತ್ಯ ಕ್ರಮ ಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದರು.

ಮುಂದುವರಿದು ಅಧ್ಯಕ್ಷರು ಮಾತನಾಡುತ್ತಾ ಇತ್ತೀಚಿನ ದಿನಗಳಲ್ಲಿ ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆಯು ಒಂದು ಬೃಹತ್ ಸಮಸ್ಯೆಯಾಗಿ ಪರಿಣಮಿಸಿದ್ದು, ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಅಧಿಕಾರಿಗಳು ಶ್ರಮಿಸಬೇಕೆಂದು, ವಲಯವಾರು ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆಯನ್ನು ಯಾವ ರೀತಿ ನಿರ್ವಹಿಸಲಾಗುತ್ತಿದೆ ಇದಕ್ಕೆ ವೆಚ್ಚ ಮಾಡುತ್ತಿರುವ ಮೊತ್ತ ಇತರೆ ವಿವರಗಳನ್ನು ಸಭೆಗೆ ಸಲ್ಲಿಸಲು ಸೂಚಿಸಿದರು.

ಮೊದಲಿಗೆ ಅಪರ ಆಯುಕ್ತರು (ಪೂರ್ವ) ವಲಯ ರವರು ಪೂರ್ವ ವಲಯದಲ್ಲಿ ಒಟ್ಟು 44 ವಾರ್ಡ್‌ಗಳಿದ್ದು, 2012ನೇ ಸಾಲಿನಲ್ಲಿ ಘನತ್ಯಾಜ್ಯ ವಿಲೇವಾರಿ ನಿರ್ವಹಣೆಗೆ ಟೆಂಡರ್ ಕರೆದಿದ್ದು, ಸದರಿ ಅವಧಿಯು ಈಗಾಗಲೇ ಮುಗಿದಿದ್ದು, 33 ವಾರ್ಡ್‌ಗಳಲ್ಲಿ ಇಲಾಖಾ ವತಿಯಿಂದ ನಿರ್ವಹಿಸುತ್ತಿದ್ದು, 11 ವಾರ್ಡ್‌ಗಳಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ ನಿರ್ವಹಿಸುತ್ತಿರುವುದಾಗಿ, ಟೆಂಡರ್ ಕರೆಯಲು ಕ್ರಮ ಕೈಗೊಳ್ಳಬೇಕೆಂದು, 01–04–2014ರಿಂದ 4ಜಿ ವಿನಾಯಿತಿ ಆಗಿರುವುದಿಲ್ಲವೆಂದು ತಿಳಿಸುತ್ತಾ ಪೂರ್ವ ವಲಯದಲ್ಲಿ ಪ್ರತಿ ತಿಂಗಳು ರೂ.10.65ಕೋಟಿ ಗಳನ್ನು ಘನತ್ಯಾಜ್ಯ ವಿಲೇವಾರಿ ನಿರ್ವಹಣೆಗೆ ಹಾಗೂ ರೂ.25.00ಲಕ್ಷಗಳನ್ನು ಘನತ್ಯಾಜ್ಯ ವಿಲೇವಾರಿ ಘಟಕದ ನಿರ್ವಹಣೆಗೆ ಖರ್ಚು ಮಾಡುತ್ತಿರುವುದಾಗಿ ತಿಳಿಸುತ್ತಾ ಪ್ರತಿ ದಿನ ಪೂರ್ವ ವಲಯ ವ್ಯಾಪ್ತಿಯಲ್ಲಿ 900 ಟನ್ ಕಸ ಉತ್ಪತ್ತಿಯಾಗುತ್ತಿರುವುದಾಗಿ, ಸದರಿ ತ್ಯಾಜ್ಯವನ್ನು ಬಾಗಲೂರು, ಮಾವಳ್ಳಿಪುರ ಘಟಕಗಳಿಗೆ ಸಾಗಿಸುತ್ತಿರುವುದಾಗಿ ಮಾಹಿತಿ ನೀಡಿದರು.

ನಂತರ ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರು ದಕ್ಷಿಣ ವಲಯ ವ್ಯಾಪ್ತಿಯಲ್ಲಿ 44 ವಾರ್ಡ್‌ಗಳಿದ್ದು, ಸದರಿ ವಾರ್ಡ್‌ಗಳಿಂದ ಅಂದಾಜು ಸುಮಾರು 1000ಟನ್‌ಗಳಷ್ಟು ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಪ್ರತಿ ತಿಂಗಳಿಗೆ ರೂ.11.57ಕೋಟಿ ಮೊತ್ತವನ್ನು ಘನತ್ಯಾಜ್ಯ ವಿಲೇವಾರಿಗೆ ಪಾವತಿಸುತ್ತಿರುವುದಾಗಿ ಹಾಗೂ ತ್ಯಾಜ್ಯವನ್ನು ಕನ್ನಳ್ಳಿ ಘಟಕಕ್ಕೆ ವಿಲೇವಾರಿ ಮಾಡುತ್ತಿರುವುದಾಗಿ ತಿಳಿಸಿದರು.

ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಮೆಕಾನಿಕಲ್ ಸ್ವೀಪಿಂಗ್ ವ್ಯವಸ್ಥೆಯಡಿಯಲ್ಲಿ ರಸ್ತೆಗಳನ್ನು ಸ್ವಚ್ಛಗೊಳಿಸಲಾಗುತ್ತಿದ್ದು ಈ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಲು ಸೂಚಿಸಿದಾಗ, ಅಧೀಕ್ಷಕ

ಅಭಿಯಂತರರು ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ರಿಂಗ್ ರಸ್ತೆಯವರೆಗೆ ಪ್ರತಿದಿನ ಮೆಕಾನಿಕಲ್ ಸ್ವೀಪಿಂಗ್ ಮುಖಾಂತರ ರಸ್ತೆಗಳನ್ನು ಸ್ವಚ್ಛಗೊಳಿಸುತ್ತಿರುವುದಾಗಿ  ತಿಳಿಸಿದರು.

ನಂತರ ಶ್ರೀಯುತ ಗೌತಮ್‌ಕುಮಾರ್, ಸದಸ್ಯರು ಮಾತನಾಡುತ್ತಾ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಪಟ್ಟ ಬಿಲ್ಲನ್ನು ಪಾವತಿಸುವ ಮುನ್ನ ಯಾವ ಯಾವ ಅಂಶಗಳನ್ನು ಗಮನಿಸಲಾಗುತ್ತದೆ, ಈ ಬಗ್ಗೆ ಮಾಹಿತಿಯನ್ನು ನೀಡಲು ಅಧೀಕ್ಷಕ ಅಬಿಯಂತರರು (ದಕ್ಷಿಣ) ರವರಿಗೆ ಸೂಚಿಸಿದಾಗ, ಇಎಸ್ಐ ಮತ್ತು ಪಿಎಫ್ ಕಟಾಯಿಸಿರುವ ಬ್ಯಾಂಕ್ ಖಾತೆಗೆ ಸಂದಾಯ ಮಾಡಿರುವ ವಿವರ, ಪೌರಕಾರ್ಮಿಕರ ಹಾಜರಾತಿ, ಸರಿಯಾಗಿರುವ ಬಗ್ಗೆ ಖಚಿತಪಡಿಸಿಕೊಂಡು ಬಿಲ್ಲನ್ನು ಪಾವತಿಸಲು ಅನುಮೋದಿಸುವುದಾಗಿ ತಿಳಿಸಿದರು.

ಬೊಮ್ಮನಹಳ್ಳಿ ವಲಯ ಅಧೀಕ್ಷಕ ಅಭಿಯಂತರು ಮಾತನಾಡುತ್ತಾ, ಬೊಮ್ಮನಹಳ್ಳಿ ವಲಯದಲ್ಲಿ ಒಟ್ಟು 16 ವಾರ್ಡ್‌ಗಳಿದ್ದು, ಸುಮಾರು 188ಟನ್‌ಗಳಷ್ಟು ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಒಟ್ಟು ರೂ.4.19ಕೋಟಿಗಳನ್ನು ಘನತ್ಯಾಜ್ಯ ವಿಲೇವಾರಿಗೆ ಪಾವತಿಸುತ್ತಿರುವುದಾಗಿ, ಹಸಿ ಕಸವನ್ನು ಕೆಸಿಡಿಸಿ ಗೆ ಹಾಗೂ ಒಣ ಕಸವನ್ನು ಬೆಳ್ಳಳ್ಳಿ ಘಟಕಕ್ಕೆ ಸಾಗಿಸುತ್ತಿರುವುದಾಗಿ ಮಾಹಿತಿ ನೀಡಿದರು.

ಮಹದೇವಪುರ ವಲಯದ ಅಧೀಕ್ಷಕ ಅಭಿಯಂತರರು ಮಾತನಾಡುತ್ತಾ ಮಹದೇವಪುರ ವಲಯದಲ್ಲಿ ಒಟ್ಟು 17 ವಾರ್ಡ್‌ಗಳಿದ್ದು, ಪ್ರತಿ ದಿನ ಸುಮಾರು 380ಟನ್‌ಗಳಷ್ಟು ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಒಟ್ಟು ರೂ.5.8ಕೋಟಿಗಳನ್ನು ಘನತ್ಯಾಜ್ಯ ವಿಲೇವಾರಿಗೆ ವೆಚ್ಚ ಮಾಡುತ್ತಿರುವುದಾಗಿ ತಿಳಿಸಿದರು.

ದಾಸರಹಳ್ಳಿ ವಲಯದ ಜಂಟಿ ಆಯುಕ್ತರರು ಮಾತನಾಡುತ್ತಾ ದಾಸರಹಳ್ಳಿ ವಲಯ ವ್ಯಾಪ್ತಿಯಲ್ಲಿ ಒಟ್ಟು 8 ವಾರ್ಡ್‌ಗಳಿದ್ದು, ಒಟ್ಟು 1,32,599ಮನೆಗಳಿದ್ದು ಪ್ರತಿದಿನ 150 ಟನ್‌ಗಳಷ್ಟು ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು  ರೂ.1.49ಕೋಟಿಗಳನ್ನು ಘನತ್ಯಾಜ್ಯ ವಿಲೇವಾರಿಗೆ ವೆಚ್ಚ ಮಾಡುತ್ತಿರುವುದಾಗಿ ಮಾಹಿತಿ ನೀಡಿದರು.

ಯಲಹಂಕ ವಲಯದ ಅಧೀಕ್ಷಕ ಅಭಿಯಂತರರು ಮಾತನಾಡುತ್ತಾ, ಯಲಹಂಕ ವಲಯದಲ್ಲಿ ಒಟ್ಟು 11 ವಾರ್ಡ್‌ಗಳಿದ್ದು, ಪ್ರತಿದಿನ ಸುಮಾರು 200 ಟನ್‌ಗಳಷ್ಟು ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು,

ರೂ.3.5ಕೋಟಿಗಳನ್ನು ಘನತ್ಯಾಜ್ಯ ವಿಲೇವಾರಿಗೆ ವೆಚ್ಚ ಮಾಡುತ್ತಿರುವುದಾಗಿ, ತ್ಯಾಜ್ಯವನ್ನು ಮಾವಳ್ಳಿಪುರ ಮತ್ತು ಬೆಳ್ಳಳ್ಳಿ ಕ್ವಾರಿಗೆ ಸಾಗಿಸುತ್ತಿರುವುದಾಗಿ ಮಾಹಿತಿ ನೀಡಿದರು.

ಆರ್.ಆರ್.ನಗರ ವಲಯದ ಅಧೀಕ್ಷಕ ಅಭಿಯಂತರರು ಮಾತನಾಡುತ್ತಾ ಆರ್.ಆರ್.ನಗರ ವಲಯದಲ್ಲಿ ಒಟ್ಟು 9 ವಾರ್ಡ್‌ಗಳಿದ್ದು, ಪ್ರತಿದಿನ ಸುಮಾರು 220–240 ಟನ್‌ಗಳಷ್ಟು ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ರೂ.3.14ಕೋಟಿಗಳನ್ನು ಘನತ್ಯಾಜ್ಯ ವಿಲೇವಾರಿಗೆ ವೆಚ್ಚ ಮಾಡುತ್ತಿರುವುದಾಗಿ, ಹಸಿ ಕಸವನ್ನು ಸೀಗೇಹಳ್ಳಿ ಘಟಕಕ್ಕೆ ಒಣ ಕಸವನ್ನು ಎಂಎಸ್‌ಡಬ್ಲ್ಯೂ ಘಟಕಕ್ಕೆ ಸಾಗಿಸುತ್ತಿರುವುದಾಗಿ ಮಾಹಿತಿ ನೀಡಿದರು. ಸೀಗೇಹಳ್ಳಿ ಘಟಕದ ನಿರ್ವಹಣೆಗೆ ವರ್ಷಕ್ಕೆ ರೂ.75.00ಲಕ್ಷಗಳನ್ನು ಖರ್ಚು ಮಾಡುತ್ತಿರುವುದಾಗಿ ತಿಳಿಸಿದರು.

ನಂತರ ಅಧ್ಯಕ್ಷರು ಲೆಕ್ಕ ಪರಿಶೋಧನಾ ವರದಿಗೆ ಸಂಬಂಧಿಸಿದಂತೆ ವಲಯ ವ್ಯಾಪ್ತಿಯಲ್ಲಿ ಎಷ್ಟು ಸಭೆಗಳನ್ನು ನಡೆಸಲಾಗಿದೆ ಎಂಬುದರ ಮಾಹಿತಿ ನೀಡಲು ಸೂಚಿಸಿದಾಗ, ಹಾಜರಿದ್ದ ಅಧಿಕಾರಿಗಳು ಲೆಕ್ಕಪರಿಶೋಧನಾ ವರದಿಗಳಿಗೆ ಸಂಬಂಧಿಸಿದಂತೆ, ಈಗಾಗಲೇ ವಲಯಗಳಲ್ಲಿ ಸಭೆಯನ್ನು ನಡೆಸಲಾಗಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಸಭೆಗಳನ್ನು ನಡೆಸಿ ಬಾಕಿ ಇರುವ ಕಂಡಿಕೆಗಳು, ವಸೂಲಾತಿ ಮತ್ತು ಆಕ್ಷೇಪಣೆಗಳಿಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ತದನಂತರ ಶ್ರೀಯುತ ಗೌತಮ್‌ಕುಮಾರ್, ಸದಸ್ಯರು ಮಾತನಾಡುತ್ತಾ ಘನತ್ಯಾಜ್ಯ ವಿಲೇವಾರಿ ಹಾಗೂ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸದೇ ಅಧಿಕಾರಿಗಳು ಅಕ್ರಮಗಳಲ್ಲಿ ಬಾಗಿಯಾಗಿರುತ್ತಾರೆಂದು ದೂರುಗಳು ಬರುತ್ತಿದ್ದು, ಇದರಿಂದ ಪಾಲಿಕೆಗೆ ಬಹಳಷ್ಟು ಆರ್ಥಿಕ ನಷ್ಟವುಂಟಾಗುತ್ತಿದ್ದು, ಅಲ್ಲದೆ ಆರ್.ಆರ್.ನಗರ ವಲಯಕ್ಕೆ ಸಂಬಂಧಿಸಿದಂತೆ ಹಲವಾರು ದೂರುಗಳಿದ್ದು, ಸಮಿತಿಯು ತಪಾಸಣೆ ಕೈಗೊಂಡ ಸಂದರ್ಭದಲ್ಲಿ ಈ ಬಗ್ಗೆ ಪರಿಶೀಲಿಸಿದ್ದು, ಇನ್ನು ಮುಂದೆ ಯಾವುದೇ ದೂರುಗಳು ಬಾರದಂತೆ ಅಧಿಕಾರಿಗಳು ಕರ್ತವ್ಯ ನಿರ್ವಹಿಸಬೇಕೆಂದು ಸೂಚಿಸುತ್ತಾ ಕಛೇರಿಯ ಲೆಕ್ಕಪತ್ರಗಳ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕೆಂದು ಹಾಗೂ ಬ್ಯಾಂಕ್ ಖಾತೆಗಳಲ್ಲಿ ಇರುವ ಮೊತ್ತದ ವಿವರಗಳನ್ನು ದಿನನಿತ್ಯ ಪರಿಷ್ಕರಿಸಬೇಕೆಂದು ತಿಳಿಸಿದರು.

ಕೊನೆಯಲ್ಲಿ ಅಧ್ಯಕ್ಷರು ಮಾತನಾಡುತ್ತಾ, ಸಮಿತಿಯು ಕೋರಿರುವ ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು ಒಂದು ವಾರದ ಒಳಗೆ ಸಮಿತಿಗೆ ಸಲ್ಲಿಸಲು ಸೂಚಿಸುತ್ತಾ, ಅಧಿಕಾರಿ/ಸಿಬ್ಬಂದಿಗಳು ಕಛೇರಿಯ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಅಸಡ್ಡೆ ಮನೋಭಾವವನ್ನು ತೋರದೆ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕರ್ತವ್ಯವನ್ನು ನಿರ್ವಹಿಸಬೇಕೆಂದು, ಸಮಿತಿಯು ತಮ್ಮ ಕಛೇರಿಗೆ ಭೇಟಿ ನೀಡಿ ತಪಾಸಣೆ ಕೈಗೊಳ್ಳುವ ಸಂದರ್ಭದಲ್ಲಿ ಯಾವುದೇ ರೀತಿಯ ಲೋಪ ದೋಷಗಳು ಇಲ್ಲದಂತೆ ಎಲ್ಲಾ ಕಡತಗಳನ್ನು ನಿರ್ವಹಿಸಿರಲು ಸೂಚಿಸುತ್ತಾ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಿದರು.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ

**ಪ್ರತಿಯನ್ನು:**

1.ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ವಿಶೇಷ ಕರ್ತವ್ಯಾಧಿಕಾರಿ ರವರಿಗೆ ಕಳುಹಿಸಿದೆ.
2.ಮಾನ್ಯ ಉಪ ಮಹಾಪೌರ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸಿದೆ.
3.ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
4.ಮಾನ್ಯ ಆಡಳಿತ ಪಕ್ಷದ ನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಜೆ.ಡಿ.ಎಸ್. ಪಕ್ಷದ ನಾಯಕರಿಗೆ ಮಾಹಿತಿಗಾಗಿ ಕಳುಹಿಸಿದೆ.
5.ಎಲ್ಲಾ ವಲಯ ಅಪರ/ಜಂಟಿ ಆಯುಕ್ತರರುಗಳಿಗೆ ಕಳುಹಿಸುತ್ತಾ ಸಭೆಯಲ್ಲಿ ಚರ್ಚಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ತಿಳಿಸಿದೆ.
6.ಎಲ್ಲಾ ವಲಯ ಅಧೀಕ್ಷಕ ಅಭಿಯಂತರರುಗಳಿಗೆ ಕಳುಹಿಸುತ್ತಾ ಸಭೆಯಲ್ಲಿ ಚರ್ಚಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ತಿಳಿಸಿದೆ
7.ಕಛೇರಿ ಕಡತಕ್ಕೆ